# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯದ ಸಂಖ್ಯೆ: 229/2008-09**

ವೃಷಭಾವತಿ ಕಣಿವೆಯ ವ್ಯಾಪ್ತಿಯಲ್ಲಿ ಬರುವ ವೃಷಭಾವತಿ ನಾಲೆಯ ಸಿವೇಜ್‌ಟ್ರೀಟ್‌ಮೆಂಟ್ ಪ್ಲಾಂಟ್ ಹತ್ತಿರದ ಲೆವೆಲ್ ಕಾಸ್‌ವೇ ಇಂದ ಸೇತುವೆಯವರಿಗೆ ಚೈನ್‌ಲಿಂಕ್ ಫೆನ್ಸಿಂಗ್ ಮತ್ತು ಆರ್.ಸಿ.ಸಿ. ತಡೆಗೋಡೆ ನಿರ್ಮಾಣದ (ಸರಪಳಿ:17630 ರಿಂದ 17750 ರವರೆಗೆ) ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಲೋಕ್ ಅದಾಲತ್‌ನ ಡಬ್ಲ್ಯೂ ಪಿ ಸಂಖ್ಯೆ:13473/1998 (ಪಿಐಎಲ್) ದಿ:14/01/08 ರ ವಿಚಾರಣಾ ಸಮಯದಲ್ಲಿ ಬೃಹತ್ ನೀರುಗಾಲುವೆ, ವೃಷಭಾವತಿ ಕಣಿವೆ ಮುಖ್ಯ ಚರಂಡಿಯಲ್ಲಿ ಹರಿಯುತ್ತಿರುವ ಘನತ್ಯಾಜ್ಯ ವಸ್ತುಗಳನ್ನು ಹಾಗೂ ನಾಲೆಯಲ್ಲಿ ಸುರಿದಿರುವ ಡೆಬ್ರೀಸ್‌ಗಳನ್ನು ತೆಗೆದು ನಾಲೆಯನ್ನು ಶುದ್ಧೀಕರಿಸುವ ಸಲುವಾಗಿ ಪ್ರದಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಹಾಗೂ ಇತರ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲು ಆದೇಶಿಸಲಾಗಿತ್ತು. ಅದರಂತೆ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಜಲಮಂಡಳಿ ಅಧ್ಯಕ್ಷರು, ಬಿ.ಬಿ.ಎಂ.ಪಿ ಆಯುಕ್ತರು, ಬಿ.ಬಿ.ಎಂ.ಪಿ ವಿಶೇಷ ಆಯುಕ್ತರು, ವಿಶೇಷ ಆಯುಕ್ತರು (ಕಂದಾಯ) ಬೆಂಗಳೂರು ನಗರ, ಮುಖ್ಯ ಇಂಜಿನಿಯರ್‌ಗಳು ಬಿಡಿಎ, ಬಿ.ಬಿ.ಎಂ.ಪಿ, ಸಣ್ಣನೀರಾವರಿ, ಬೆಂಗಳೂರು ಜಲಮಂಡಳಿ, ಸಿಇಓ ಕೆಎಸ್‌ಪಿಸಿಬಿ ಇವರೊಂದಿಗೆ ಸ್ಥಳ ಪರಿಶೀಲನೆ ಮಾಡಿ ಕೆಂಗೇರಿ ಹತ್ತಿರ ಇರುವ ನಾಲೆಯ ಕಾಮಗಾರಿಯನ್ನು 10/03/2008 ರಂದು ಪ್ರಾರಂಭಿಸಬೇಕೆಂದು ಆದೇಶ ನೀಡಿರುತ್ತಾರೆ.

ವೃಷಭಾವತಿ ಕಣಿವೆಯ ವ್ಯಾಪ್ತಿಯಲ್ಲಿ ಬರುವ ವೃಷಭಾವತಿ ನಾಲೆಯ ಸಿವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಹತ್ತಿರದ ಲೆವೆಲ್ ಕಾಸ್‌ವೇಯಿಂದ ಸೇತುವೆಯ ಚೈನ್‌ಲಿಂಕ್ ಫೆನ್ಸಿಂಗ್ ಮತ್ತು ಆರ್.ಸಿ.ಸಿ. ತಡೆಗೋಡೆ ನಿರ್ಮಾಣದ (ಸರಪಳಿ:17630 ರಿಂದ 17750 ರವರೆಗೆ) ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಶ್ರೀಎಂ.ಬಿ ಗುರುದೇವ್ ಗುತ್ತಿಗೆದಾರರವರ ಮೂಲಕ ಮಂಜೂರಾದ ದರಗಳಂತೆ ನಿರ್ವಹಿಸಲು ಆದೇಶಿಸಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಕಾಮಗಾರಿಯು ಮುಗಿಯುವ ಹಂತದಲ್ಲಿ ಇರುತ್ತದೆ. ಈ ಕಾಮಗಾರಿಯನ್ನು ಅತ್ಯಂತ ತುರ್ತಾಗಿ ನಿರ್ಮಿಸಬೇಕಾಗಿರುವುದರಿಂದ, ಲೋಕೋಪಯೋಗಿ ಇಲಾಖೆಯ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಅದರ ಮೊತ್ತವು ರೂ.72.00 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಯ ಮೊತ್ತವನ್ನು ಬೃಹತ್ ನೀರುಗಾಲುವೆ ಸಿಆರ್‌ಎಫ್ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸಬಹುದಾಗಿದೆ.

ಸದರಿ ಕಾಮಗಾರಿಯ ರೂ.72,00,000.00 ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಶ್ರೀಎಂ.ಬಿ. ಗುರುದೇವ್, ಒಂದನೇ ದರ್ಜೆ ಗುತ್ತಿಗೆದಾರರ ಮೂಲಕ ಮಂಜೂರಾದ ದರಗಳಂತೆ ನಿರ್ವಹಿಸಲು ಆದೇಶ ಕೋರಿ ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:09/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:09/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/06/2008 ರ ನಡವಳಿಗಳು**

ವಿಷಯದ ಸಂಖ್ಯೆ:145/2008–09

ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ 78 ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಆಸ್ತಿ ಸಂಖ್ಯೆ:3 ರಲ್ಲಿನ ನಗರ ಪಾಲಿಕೆ ಜಾಗವನ್ನು ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ವೆಲ್‌ಫೇರ್ ರವರ ಗುತ್ತಿಗೆ ಮತ್ತು ಉಪ ಗುತ್ತಿಗೆಯನ್ನು ರದ್ದುಪಡಿಸುವ ಬಗ್ಗೆ.

ಪ್ರಸ್ತಾವನೆ:

ಮಿಲ್ಲರ್ ಟ್ಯಾಂಕ್ ಬಂಡ್ ವ್ಯಾಪ್ತಿಯಲ್ಲಿ ಬರುವ ಮಹಾನಗರ ಪಾಲಿಕೆಯ 45,000 ಚದರ ಅಡಿಯುಳ್ಳ (5000 ಚದರ ಗಜ) ಆಸ್ತಿ ಸಂಖ್ಯೆ–3 ಅನ್ನು ಸರ್ಕಾರದಲ್ಲಿ ನಮೂದಿಸಿದ ಸರ್ಕಾರದ ಅನುಮತಿ ಅನ್ವಯ ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಎಂಬ ಸರ್ಕಾರಿಯೇತರ ಸಂಸ್ಥೆಗೆ ವಾರ್ಷಿಕ ಗುತ್ತಿಗೆ ಹಣ ರೂ.100/–ರಂತೆ 99 ವರ್ಷಗಳ ಕಾಲ ಗುತ್ತಿಗೆ ನೀಡಲು ಅನುಮತಿ ದೊರಕಿರುತ್ತದೆ.

ಸದರಿ ಅನುಮತಿಯನ್ನು ಅನುಸರಿಸಿ ಅಂದಿನ ಮಹಾನಗರ ಪಾಲಿಕೆಯು ದಿನಾಂಕ:10/02/1976 ರಂದು ಗುತ್ತಿಗೆ ಪತ್ರವನ್ನು ನೋಂದಣಿ ಮಾಡಲಾಗಿರುತ್ತದೆ ಹಾಗೂ ಗುತ್ತಿಗೆಯನ್ನು ನೀಡುವಾಗ ಈ ಕೆಳಕಂಡ ಷರತ್ತುಗಳನ್ನು ಸಂಸ್ಥೆಗೆ ವಿಧಿಸಲಾಗಿದೆ.

**Now the Terms and conditions of the lease agreed between the lessee and lessor of the follows:**

1. The lease of the said Corporation Land described in the schedule here under and marked as red in the sketch attached here to here by granted by the lessor to the lessee for a period 99 years from this day on an annual rent of Rs.100-00 (Rupees one hundred only)
2. The lesser here by knowledge the receipt of sum of Rs.100-00 (Rupees one hundred only)paid by the lessee to lessor as afford said as an advance rent.
3. The lessee shall pay the annual rent of Rs.100-00 (Rupees one hundred only) to the lesser every year on or before 9th Feb of each year.
4. The lessee shall use the building schedule and only for the purpose for the which it is leased and not for any other purposes.
5. The lessee shall not sub-lease or part with possession of the schedule land in any manner what so ever.
6. The deposit of Rs.300-00 (Rupees three hundered only) made by the lessee with the lessor as aforesaid shall be refund to the lessee by the lessor on the expiry of the period of lease and delivery of possession of the schedule land.
7. On the breach of any aforesaid conditions by the lessee, the lessor shall be entitled to resume possession of schedule land after issue of proper notice not with standing on expired period of lease.
8. The lessee should surrender the possession of the schedule land to the lessor on the expiry of the lease period of 99 years, for which the lessor will be entitled to the possession there of with out recourse to the court of law.

**The lease is however liable to be renewed for further period as agreed between parties after mutual negotiations.**

. . . 2

ಈ ರೀತಿ ವಿಧಿಸಿದ ಷರತ್ತುಗಳನ್ವಯ ಸಂಸ್ಥೆಯು ತನ್ನ ಉದ್ದೇಶವನ್ನು ಯಶಸ್ವಿಗೊಳಿಸಲು ಕಾರ್ಯೋನ್ಮುಖವಾಗಬೇಕಾಗಿತ್ತು. ಆದರೆ, ಸಂಸ್ಥೆಯು ಗುತ್ತಿಗೆಯಲ್ಲಿ ವಿಧಿಸಿದ ಷರತ್ತುಗಳನ್ವಯ ಕಾರ್ಯನಿರ್ವಹಿಸುತ್ತಿರುವ ಬದಲು ಗುತ್ತಿಗೆ ಕರಾರಿನಲ್ಲಿ ವಿಧಿಸಿದ ಷರತ್ತಿನಂತೆ ಕಟ್ಟಡವನ್ನು ಕಾಲಮಿತಿಯೊಳಗೆ ಕಟ್ಟದೇ ವಿಳಂಬ ಮಾಡಿರುತ್ತಾರೆ. ತದನಂತರ ಸಂಸ್ಥೆಯು ಹಣಕಾಸಿನ ಮುಗ್ಗಟನ್ನು ಎದುರಿಸುತ್ತಿರುವ ಕಾರಣ ಉಪ ಗುತ್ತಿಗೆಯನ್ನು ನೀಡಿ ಅದರಿಂದ ಕಟ್ಟಡದ ನಿರ್ವಹಣೆಯನ್ನು ಮಾಡುವ ಉದ್ದೇಶದಿಂದ ಪ್ರಾರಂಭಿಕವಾಗಿ ಪಾಲಿಕೆಯ ಅನುಮತಿಯನ್ನು ಪಡೆಯದೇ 5 ಲಕ್ಷ ರೂ.ಗಳನ್ನು ಮುಂಗಡವಾಗಿ ಪಡೆದಿರುತ್ತದೆ. ನಂತರ ಪಾಲಿಕೆಯು ದಿನಾಂಕ:09/12/1995 ರ ಸಭೆಯ ವಿಷಯದ ಸಂಖ್ಯೆ:291 ರಂತೆ ಪ್ರಸ್ತಾವನೆಯನ್ನು ತೀರ್ಮಾನಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ಪ್ರಸ್ತಾಪಿಸಿದ ಈ ಪ್ರಸ್ತಾವನೆಗೆ ಸರ್ಕಾರವು ದಿನಾಂಕ30/07/1999 ರಂದು ಸರ್ಕಾರವು ತನ್ನ ಅನುಮತಿಯನ್ನು ಈ ಕೆಳಕಂಡ ಷರತ್ತಿನೊಂದಿಗೆ ನೀಡಿದೆ.

1. ವಸತಿ ಗೃಹದ ದುರಸ್ಥಿ ಮತ್ತು ನಿರ್ವಹಣೆಗೆ ಸರ್ಕಾರದಿಂದ ಯಾವುದೇ ತರಹದ ಆರ್ಥಿಕ ನೆರವನ್ನು ನೀಡಲಾಗುವುದಿಲ್ಲ.
2. ಐ.ಸಿ.ಎಸ್.ಡಬ್ಲ್ಯೂ ಸಂಸ್ಥೆಯು ಬಾಕಿ ಇರುವ 82,000/– ರೂ.ಗಳನ್ನು ಸರ್ಕಾರಕ್ಕೆ ಮರುಪಾವತಿಸಬೇಕು.
3. ಸದರಿ ಸಂಸ್ಥೆಯು ಒಂದು ವರ್ಷದೊಳಗೆ ವಸತಿ ಗೃಹವನ್ನು ಪ್ರಾರಂಭಿಸಬೇಕು.
4. ಮತ್ತು ಈ ವಸತಿ ಗೃಹವನ್ನು ಉದ್ಯೋಗಸ್ಥ ಮಹಿಳೆಯರಿಗೆ ಮಾತ್ರ ಉಪಯೋಗಿಸಬೇಕು.

ಇದಾದ ಮೇಲೆ ಪುನ: ಸರ್ಕಾರವು ಮೇಲೆ ವಿಧಿಸಿದ ಷರತ್ತುಗಳನ್ನು ಭಾಗಶ: ಸಡಿಲಿಸಿ, ದಿನಾಂಕ:30/09/1999 ರಂದು ಹೋಟೆಲ್ ನಡೆಸುವಾಗ ಯಾವುದೇ ರೀತಿಯ ಅಸಹ್ಯ ಹಾಗೂ ಅಶಾಂತಿ ತಲೆದೋರುವಂತಹ ಘಟನೆಗೆ ಅವಕಾಶ ಕೊಡದೇ ಕಟ್ಟಡವನ್ನು ನಿರ್ವಹಿಸಬೇಕೆಂಬ ಷರತ್ತಿಗೆ ಒಳಪಡಿಸಿ ನೀಡಿರುತ್ತದೆ. ಆದರೆ, ಮಾರ್ಪಡಿಸಿದ ಷರತ್ತನ್ನು ಸಹ ಯಥಾವತ್ತಾಗಿ ಪಾಲಿಸಿರುವುದಿಲ್ಲ. 3ನೇಯದಾಗಿ ವಾರ್ಷಿಕವಾಗಿ 100–00 ರೂ.ಗಳ ಬಾಡಿಗೆಯನ್ನು ಮತ್ತು ಆಸ್ತಿ ತೆರಿಗೆಯನ್ನು ದಿನಾಂಕ:09/12/1995 ರಂದು ಅಂದಿನ ಆಡಳಿತಗಾರರು ವಿಧಿಸಿದ ಷರತ್ತಿನಂತೆ ಪಾವತಿಸಿರುವುದಿಲ್ಲ. ಈ ಮಧ್ಯೆ ಸಂಸ್ಥೆಯು ಕಟ್ಟಡ ನಿರ್ಮಾಣಕ್ಕೆ 30 ಲಕ್ಷ ರೂ.ಗಳ ಅನುದಾನವನ್ನು ಕೇಂದ್ರೀಯ ರಾಜ್ಯ ಸರ್ಕಾರದಿಂದ ಒದಗಿಸಿ ಕೊಟ್ಟು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸಹ ಅಸಮರ್ಪಕ ನಿರ್ವಹಣೆಯನ್ನು ಗಮನಿಸಿ ಇಲಾಖೆಗೆ ವಹಿಸಿ ಕೊಡಬೇಕೆಂದು ಸತತವಾಗಿ ಒತ್ತಾಯಿಸುತ್ತದೆ. ಮತ್ತೊಂದೆಡೆ ಪಾಲಿಕೆ ಸದರಿ ಸಂಸ್ಥೆಗೆ ಅಪಾರ ಮೌಲ್ಯ ನಿವೇಶನವನ್ನು ನೀಡಿದ್ದರೂ ಸಹ ತನ್ನ ಉದ್ದೇಶಿತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರದೇ ಮತ್ತು ವಿಧಿಸಿದ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ದಿನಾಂಕ: 30/10/2000 ರಂದು ನಡೆದ ಸಭೆಯಲ್ಲಿ ವಿಷಯದ ಸಂಖ್ಯೆ:53 (94) ರಂದು ಗುತ್ತಿಗೆ ಪ್ರಸ್ತಾವನೆ ಕೈ ಬಿಡಲು ಮತ್ತು ಕಟ್ಟಡವನ್ನು ಪಾಲಿಕೆ ವಶಕ್ಕೆ ತೆಗೆದುಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ವಸತಿ ನಿಲಯ ಪ್ರಾರಂಭಿಸಲು ತೀರ್ಮಾನಿಸಿರುತ್ತದೆ. ಒಂದು ಕಡೆ ತೀರ್ಮಾನದ ಬಗ್ಗೆ ಸರ್ಕಾರ ಅನುಮತಿ ನಿರೀಕ್ಷಿಸಿ ಅದೇ ಸಮಯದಲ್ಲಿ ಪಾಲಿಕೆಯ ಉಪ ಆಯುಕ್ತರಿಂದ ಪಾಲಿಕೆ ಅಧಿನಿಯಮದಂತೆ ತೆರವುಗೊಳಿಸಲು ನೀಡಿದ ನೋಟೀಸಿಗೆ ಸಂಸ್ಥೆಯು ಉಚ್ಛನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅಂತಿಮವಾಗಿ ಗುತ್ತಿಗೆ ಒಪ್ಪಂದವನ್ನು ರದ್ದುಗೊಳಿಸುವುದಕ್ಕೆ ಮೊದಲು ಕಾನೂನು ರೀತಿ ಕ್ರಮ ಜರುಗಿಸಬೇಕೆಂದು ಸೂಚಿಸಿ ಸಂಸ್ಥೆಯ ಅರ್ಜಿಯನ್ನು ಪುರಸ್ಕರಿಸಿರುತ್ತದೆ. ಘನ ನ್ಯಾಯಾಲಯದ ಸೂಚನೆಯಂತೆ ಅನುಸರಿಸಿ ಪೂರ್ವ ವಲಯದ ಜಂಟಿ ಆಯುಕ್ತರು ಸುಧೀರ್ಘವಾದ ವಿಚಾರಣೆ ನಡೆಸಿ ಸ್ವಾಧೀನಕ್ಕೆ ತೆಗೆದುಕೊಳ್ಳಲು ನೀಡಿದ ಆದೇಶವನ್ನು ಉಪಗುತ್ತಿಗೆದಾರರ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ಯಥಾ ಸ್ಥಿತಿ ಮುಂದುವರೆಸುವಂತೆ ಆದೇಶ ಪಡೆದಿರುತ್ತಾರೆಯಾದರೂ, ಈಗ ಯಾವುದೇ ನ್ಯಾಯಲಯದಲ್ಲಿ ಪ್ರಕರಣ ಬಾಕಿ ಇರುವುದಿಲ್ಲ ಆದರೆ ಪಾಲಿಕೆಯು ಕೆ.ಪಿ.ಪಿ. ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ. ಇದೇ ಸಂಧರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ತನ್ನ ಆದೇಶ ಸಂಖ್ಯೆ: ಮಾಮಾಇ/125/ಮಾಭಾಬಾ ದಿನಾಂಕ:06/11/2007, ಸಂಸ್ಥಯ ಸಮಸ್ತ ಆಡಳಿತವನ್ನು ವ್ಯವಸ್ಥಾಪಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮ ವಹಿಸಿಕೊಳ್ಳುವಂತೆ ಆದೇಶಿಸಿರುತ್ತಾರೆ.

ಇಂತಹ ಪರಿಸ್ಥಿತಿಯನ್ನು ಮಹಿಳಾ ಮತ್ತು ಮಕ್ಕಳ ಸಚಿವಾಲಯದ ಕೋರಿಕೆ ಮೇರೆಗೆ ಸನ್ಮಾನ್ಯ ಮುಖ್ಯ ಕಾರ್ಯದರ್ಶಿಯವರು ದಿನಾಂಕ:05/05/2008 ರಂದು ಸಭೆ ಕರೆದು ತಕ್ಷಣ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

ಆದ್ದರಿಂದ, ಗುತ್ತಿಗೆ ಪಡೆದ ಸೇವಾ ಸಂಸ್ಥೆ ಮತ್ತು ಲಾಭದಾಯಕ ಉದ್ದೇಶದಿಂದ ಉಪ ಗುತ್ತಿಗೆ ಪಡೆದು ಖಾಸಗಿ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದ ಪೈಕಿ ಉಪಗುತ್ತಿಗೆ ಬಗ್ಗೆ ನೀಡಿದ ದಿನಾಂಕ:30/07/1999 ಮತ್ತು 30/09/1999 ರ ಪತ್ರಗಳನ್ನು ತಕ್ಷಣ ವಾಪಸ್ಸು ಪಡೆದು ಮೇಲೆ ವಿವರಿಸಿದಂತೆ, ಉಲ್ಲಂಘಿಸಿದ ಸಂಸ್ಥೆಯ ಗುತ್ತಿಗೆಯನ್ನು ಸಹ ರದ್ದು ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಕ್ಕೆ ಕುರಿತಂತೆ ಮಾನ್ಯ ಆಡಳಿತಗಾರರ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರ ದಿನಾಂಕ:13/05/2008 ರ ಟಿಪ್ಪಣಿ.

ತೀರ್ಮಾನ: "Proposal to send to Government- approved"

(ದಿಲೀಪ್ ರಾವ್)
ಆಡಳಿತಗಾರರು

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ. ದಿನಾಂಕ:17/06/2008 ರ ನಡವಳಿಗಳು

ವಿಷಯದ ಸಂಖ್ಯೆ:245/2008-09

ಜಯನಗರ ವಾಣಿಜ್ಯ ಸಂಕೀರ್ಣದ ತರಕಾರಿ ಮಾರುಕಟ್ಟೆಗೆ ಸಂಭವಿಸಿದ ಬೆಂಕಿ ಅಪಘಾತದಲ್ಲಿ ನಷ್ಟಕ್ಕೊಳಗಾದ ಮಳಿಗೆ ಪರವಾನಗಿದಾರರಿಗೆ ಹೆಚ್ಚಿನ ಪರಿಹಾರ ಮಂಜೂರು ಮಾಡುವ ಬಗ್ಗೆ.

ಪ್ರಸ್ತಾವನೆ:

ದಿನಾಂಕ:13/06/2008 ರಂದು ರಾತ್ರಿ 11.00 ಘಂಟೆ ಸಮಯದಲ್ಲಿ ಜಯನಗರ ವಾಣಿಜ್ಯ ಸಂಕೀರ್ಣದ ಆವರಣದಲ್ಲಿರುವ ತರಕಾರಿ ಮಾರುಕಟ್ಟೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಅಪಘಾತ ಸಂಭವಿಸಿರುತ್ತದೆ. ತರಕಾರಿ ಮಾರುಕಟ್ಟೆ ಆವರಣದಲ್ಲಿ ನೆಲ ಮತ್ತು ಮೊದಲನೇ ಅಂತಸ್ತುಗಳು ಒಟ್ಟು 117 ಅಂಗಡಿಗಳಿರುತ್ತವೆ. ಈ ಅಂಗಡಿಗಳಲ್ಲಿ ತರಕಾರಿ, ಹಣ್ಣು, ಗ್ರಂದಿಗೆ, ಸ್ಟೇಷನರಿ, ಬಟ್ಟೆ, ಫೋಟೋ, ಪ್ಲಾಸ್ಟಿಕ್ ಮುಂತಾದ ವಸ್ತುಗಳ ವ್ಯಾಪಾರಗಳನ್ನು ಮಾಡಲಾಗುತ್ತಿತ್ತು.

ಈ ಬೆಂಕಿ ಅಪಘಾತದಲ್ಲಿ ದಕ್ಷಿಣ ಭಾಗದಲ್ಲಿರುವ ತರಕಾರಿ ಮಾರುಕಟ್ಟೆಯ ಆವರಣವು ಸಂಪೂರ್ಣವಾಗಿ ಸುಟ್ಟು ಹೋಗಿರುತ್ತದೆ ಮತ್ತು ಅಂಗಡಿ ಮಳಿಗೆಗಳ ಛಾವಣಿ ಮತ್ತು ಒಳಭಾಗವು ಪೂರ್ಣವಾಗಿ ನಾಶವಾಗಿರುತ್ತದೆ. ಬೆಂಕಿ ಆಕಸ್ಮಿಕದಲ್ಲಿ ಒಟ್ಟು 89 ಅಂಗಡಿ ಮಳಿಗೆಗಳು ಸಂಪೂರ್ಣವಾಗಿ ನಾಶವಾಗಿದ್ದು, ಮಳಿಗೆಗಳ ಪರವಾನಗಿದಾರರು ಪರಿಹಾರಕ್ಕಾಗಿ ಒತ್ತಾಯಿಸುತ್ತಿದ್ದುದರಿಂದ ಒಟ್ಟು ಹತ್ತು ತಂಡಗಳನ್ನು ರಚಿಸಿ, ಮಳಿಗೆಗಳ ಪಟ್ಟಿಯ ಮಹಜರ್ ದಾಖಲೆಗಳನ್ನು ಸಂಗ್ರಹಿಸಲಾಗಿರುತ್ತದೆ. ಮಳಿಗೆಗಳ ವ್ಯಾಪಾರಸ್ಥರಿಗೆ ಉಂಟಾಗಿರುವ ನಷ್ಟವು ಅವರು ಹೇಳಿಕೆಯಂತೆ ಸರಾಸರಿ ರೂ.1.5 ಲಕ್ಷದಿಂದ ರೂ.3.00 ಲಕ್ಷಗಳಾಗಿರುತ್ತವೆ. ತರಕಾರಿ ಮಾರುಕಟ್ಟೆ ಕಟ್ಟಡಕ್ಕೆ ಉಂಟಾಗಿರುವ ನಷ್ಟವನ್ನು ಸುಮಾರು ರೂ.1.25 ಕೋಟಿಗಳೆಂದು ಅಂದಾಜು ಮಾಡಲಾಗಿದೆ.

ನಷ್ಟಕೊಳಗಾದ ಮಳಿಗೆಗಳ ಪರವಾನಗಿದಾರರಿಗೆ ತುರ್ತಾಗಿ ಪರಿಹಾರ ನೀಡುವ ಸಂಬಂಧ 88 ಪರವಾನಗಿದಾರರಿಗೆ ರೂ.10,000/- ರಂತೆ ಮತ್ತು ಒಬ್ಬ ಪರವಾನಗಿದಾರರಿಗೆ ರೂ.5,000/- ರಂತೆ ಒಟ್ಟು ರೂ.8,85,000/- ಗಳನ್ನು ಪರಿಹಾರ ಧನವಾಗಿ ದಿನಾಂಕ:14/06/2008 ರಂದು ವಿತರಿಸಲಾಗಿರುತ್ತದೆ. ಇನ್ನು ಎರಡು ಮಳಿಗೆಗಳು ಪೂರ್ಣವಾಗಿ ಹಾನಿಗೊಳಗಾಗಿದ್ದು, ಈ ಮಳಿಗೆಗಳ ಪರವಾನಗಿದಾರರಿಗೂ ಸಹ ಪರಿಹಾರ ಧನ ವಿತರಿಸುವ ಅಗತ್ಯವಿರುತ್ತದೆ. ದಿನಾಂಕ:15/06/2008 ರಂದು ಭಾನುವಾರ ಸಾಯಂಕಾಲ 5.30 ಘಂಟೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಾರಿಗೆ ಸಚಿವರು, ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರು ಮತ್ತು ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರು ಹಾನಿಗೊಳಗಾದ ತರಕಾರಿ ಮಾರುಕಟ್ಟೆಗೆ ಭೇಟಿ ನೀಡಿ, ಹಾನಿಗೊಳಗಾದ ತರಕಾರಿ ಮಾರುಕಟ್ಟೆಯನ್ನು ಪರಿಶೀಲಿಸಿದ ನಂತರ ಮಳಿಗೆ ಪರವಾನಗಿದಾರರ ಬೇಡಿಕೆಗಳಿಗೆ ಸ್ಪಂದಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ದಿನಾಂಕ:14/06/2008 ರಂದು ವಿತರಿಸಲಾದ ರೂ.10,000/- ಗಳ ಪರಿಹಾರ ಹಣದ ಜೊತೆಗೆ ರೂ.40,000/-ಗಳನ್ನು ಹೆಚ್ಚಿನ ಪರಿಹಾರವನ್ನಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ:17/06/2008 ರಂದು ವಿತರಿಸಲಾಗುವುದೆಂದು ಸಾರ್ವಜನಿಕವಾಗಿ ಘೋಷಿಸಿರುತ್ತಾರೆ. ಅಲ್ಲದೆ ಬೆಂಕಿ ಅನಾಹುತದಿಂದ ಹಾನಿಗೊಳಗಾದ ಮಳಿಗೆಗಳನ್ನು ಪುನರ್ ನಿರ್ಮಾಣ ಮಾಡಿ ಈಗ ವ್ಯಾಪಾರ ಮಾಡುತ್ತಿದ್ದ ಪರವಾನಗಿದಾರರಿಗೆ ಈ ಮಳಿಗೆಗಳನ್ನು ಹಂಚಿಕೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ಘೋಷಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಅನಾಹುತದಲ್ಲಿ ಹಾನಿಗೊಳಗಾದ ಒಟ್ಟು 90 ಪರವಾನಗಿದಾರರಿಗೆ ಪ್ರತಿ ಒಬ್ಬರಿಗೆ ಒಟ್ಟು ರೂ. 40,000/- ಗಳನ್ನು ಮತ್ತು ಉಳಿದ ಒಬ್ಬ ಪರವಾನಗಿದಾರರಿಗೆ ರೂ.20,000/- ಗಳನ್ನು ಹೆಚ್ಚಿನ ಪರಿಹಾರವಾಗಿ ಮಂಜೂರು ಮಾಡಬೇಕಾಗಿರುತ್ತದೆ. ಈ ಹೆಚ್ಚಿನ ಪರಿಹಾರ ಹಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಭರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ವಿತರಿಸಲಾಗಿರುವ ರೂ.8,85,000/- ಗಳ ಪರಿಹಾರ ಹಣದ ಜೊತೆಗೆ ಹೆಚ್ಚಿನ ಪರಿಹಾರವಾಗಿ ರೂ.36,40,000/- ಗಳನ್ನು ಮಂಜೂರು ಮಾಡುವ ಸಲುವಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

ವಿಷಯದ ಸಂಖ್ಯೆ: 230/08–09

Improvement to drain, Provding footpath and Construction of Culverts at Srirama Temple Road, Ejipura in Ward No.68 (From Ejipura Main Road to 80 feet Road) ರ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

Improvement to drain, Provding footpath and Construction of Culverts at Srirama Temple Road, Ejipura in Ward No.68 (From Ejipura Main Road to 80 feet Road) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ರವರು ರೂ.65.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಪ್ರಸ್ತುತ ಸಾಲಿನ ದರಪಟ್ಟಿಯಂತೆ ತಯಾರಿಸಿದ್ದು, ಸದರಿ ಕಾಮಗಾರಿಯ ವೆಚ್ಚವನ್ನು 2007–08 ರ ಅನುದಾನದ ವೆಚ್ಚದಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತವನ್ನು ಸಹ ಪಡೆಯಲಾಗಿರುತ್ತದೆ.

ಬೆಂಗಳೂರು ಮಹಾನಗರದಲ್ಲಿ ಇತ್ತೀಚಿಗೆ ಬಿದ್ದ ಭಾರಿ ಮಳೆಯಿಂದ ರಸ್ತೆಗಳು ತೀವ್ರ ಹದಗೆಟ್ಟಿದ್ದು ಈ ರಸ್ತೆಗಳನ್ನು ದುರಸ್ಥಿಪಡಿಸುವ ಹಿನ್ನೆಲೆಯಲ್ಲಿ ತೀವ್ರ ಹದಗೆಟ್ಟಿರುವ ಪ್ರಮುಖ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಮಾಡಲು ಅತಿ ಪ್ರಮುಖವಾಗಿ ಬೇಕಾಗಿರುವ ಅಂಶಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/06/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:08/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ



## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು

**ವಿಷಯದ ಸಂಖ್ಯೆ:232/2008-09**

Providing and laying 600mm dia S&S type RCC Pipe line along Vrishabhavathi Valley in the Primises of Sports Authority of India ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing and laying 600mm dia S&S type RCC Pipe line along Vrishabhavathi Valley in the Primises of Sports Authority of India ರ ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್-4 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ರೂ.75.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿದ್ದು, ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡ್‌ಗಳನ್ನು ಪರಿಶೀಲಿಸಲಾಗಿ, ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, ಇವರುಗಳ ಆರ್ಥಿಕ ಬಿಡ್‌ಗಳನ್ನು ಅಧೀಕ್ಷಕ ಅಭಿಯಂತರವರಿಂದ ಅನುಮೋದನೆ ಪಡೆದು ದಿನಾಂಕ:26/02/2008 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ.ಗಳಲ್ಲಿ) |
|---|---|---|---|
| 1 | ಶ್ರೀ ಜಿ.ಎನ್.ಕೃಷ್ಣ | 71,38,959.00 | 39.21% ರಷ್ಟು ಹೆಚ್ಚು (ರೂ.99,38,321.40) |
| 2 | ಶ್ರೀ ಎನ್.ಬಿ.ನಾಗರಾಜು | 71,38,959.00 | 49.91% ರಷ್ಟು ಹೆಚ್ಚು (ರೂ.1,07,01,662.18) |

ಶ್ರೀ.ಜಿ.ಎನ್.ಕೃಷ್ಣ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.99,38,321.40 ಗಳನ್ನು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ.39.21% ಹೆಚ್ಚಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಗುತ್ತಿಗೆದಾರರನ್ನು ದಿನಾಂಕ: 28/02/2008 ರಂದು ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರ ಕಛೇರಿಯಲ್ಲಿ ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.20.00 (ರೂ.85,66,750.80) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಇದನ್ನು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತಕ್ಕೆ ಹೋಲಿಸಿದಾಗ ಅಂದಾಜು ಮೊತ್ತವು ರೂ.71,95,556.38 ಆಗಿದ್ದು, ಇದನ್ನು ಸಂದಾನ ಮೊತ್ತಕ್ಕೆ ಹೋಲಿಸಿದಾಗ ಶೇ.19.06 ಹೆಚ್ಚಾಗಿರುತ್ತದೆ. ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಹಾಗೂ ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.85,66,750.80 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:06/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**[illegible] ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:233/2008–09**

Providing Chain Link fencing on either side of Vrishabhavathi Valley in primary and Secondary drains from SJR Womens College to Hosahalli Bridge ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing Chain Link fencing on either side of Vrishabhavathi Valley in primary and Secondary drains from SJR Womens College to Hosahalli Bridge ರ ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್–1 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ರೂ.90.00 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿದ್ದು. ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡ್‌ಗಳನ್ನು ಪರಿಶೀಲಿಸಲಾಗಿ, ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, ಇವರುಗಳ ಆರ್ಥಿಕ ಬಿಡ್‌ಗಳನ್ನು ಅಧೀಕ್ಷಕ ಅಭಿಯಂತರರವರಿಂದ ಅನುಮೋದನೆ ಪಡೆದು ದಿನಾಂಕ:25/01/2008 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಗುತ್ತಿಗೆದಾರರು ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ.ಗಳಲ್ಲಿ) |
|---|---|---|---|
| 1 | ಶ್ರೀ ಎಂ. ಶ್ರೀನಿವಾಸ್ | 84,90,232.18 | 24.77% ರಷ್ಟು ಹೆಚ್ಚು (ರೂ.1,05,92,930.00) |
| 2 | ಶ್ರೀ ಸಿ.ಜಿ.ಚಂದ್ರಪ್ಪ | 84,90,232.18 | 29.48% ರಷ್ಟು ಹೆಚ್ಚು (ರೂ.1,09,93,330.00) |

ಶ್ರೀ ಎಂ.ಶ್ರೀನಿವಾಸ್, ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.1,05,92,930.00 ಗಳನ್ನು 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ24.77% ಹೆಚ್ಚಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಗುತ್ತಿಗೆದಾರರನ್ನು ದಿನಾಂಕ: 20/02/2008 ರಂದು ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರ ಕಛೇರಿಯಲ್ಲಿ ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.14.00 (ರೂ.96,78,864.69) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಇದನ್ನು ಈಗಿನ ತ್ರೈಮಾಸಿಕ ಸಿಮೆಂಟ್ ಮತ್ತು ಉಕ್ಕಿನ ದರಗಳನ್ನು ಅಳವಡಿಸಿಕೊಂಡಿರುವ ಮೊತ್ತಕ್ಕೆ ಹೋಲಿಸಿದಾಗ ಶೇ.(–)3.30 ಕಡಿಮೆಯಾಗಿರುತ್ತದೆ. ಆದುದರಿಂದ, ಸದರಿ ಕಾಮಗಾರಿಗೆ ಆಡಳಿತಾತ್ಮಕ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.96,78,864.69 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/05/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:30/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:235/08-09**

ವೃಷಭಾವತಿ ಕಣಿವೆಯ ವಿ-200 ರಲ್ಲಿ ಸರಪಳಿ 6900 ಮೀ ನಿಂದ ಸರಪಳಿ 7100 ಮೀ ವರಗೆ ಆರ್.ಸಿ.ಸಿ. ಪ್ರಿ ಕಾಸ್ಟ್ ಸೆಲ್ಯೂಲಾರ್ ಸೆಗ್‌ಮೆಂಟ್‌ಗಳನ್ನು ಅಳವಡಿಸಿಕೊಂಡು ನಾಲೆಯನ್ನು ಪುನರ್ ನವೀಕರಣ ಮಾಡುವ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

ವೃಷಭಾವತಿ ನಾಲೆಯ ತುಮಕೂರು ರಸ್ತೆಯಿಂದ ಪ್ರಾರಂಭವಾಗಿ ಮಾಗಡಿ ರಸ್ತೆಯ ಮುಖಾಂತರ ಹರಿದು ಮೈಸೂರು ರಸ್ತೆಯಲ್ಲಿರುವ ಮುಖ್ಯ ವಾಹಿನಿಯನ್ನು ಸೇರುತ್ತದೆ. ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಯ ವರಗೆ ವೃಷಭಾವತಿ ಕಣಿವೆಯನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಬೃಹತ್ ನೀರುಗಾಲುವೆ ಜೆ.ಎನ್.ಎನ್.ಯು.ಆರ್.ಎಂ. ಯೋಜನೆ – ಪುನರ್ ನವೀಕರಣ ಯೋಜನೆ, ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಯವರೆಗೆ ನಾಲೆಯ ಎರಡೂ ಪಕ್ಕದಲ್ಲಿ ಕೊಳಚೆ ನೀರನ್ನು ಶುದ್ಧೀಕರಿಸುವ ಘಟಕಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ನಾಲೆಯ ಎರಡೂ ಪಕ್ಕದಲ್ಲಿ ಸರ್ವಿಸ್ ರಸ್ತೆಗಳ ನಿರ್ಮಾಣವನ್ನು ಆರ್.ಸಿ.ಸಿ. ಪ್ರಿ ಕಾಸ್ಟ್ ಸೆಲ್ಯೂಲಾರ್ ಸೆಗ್‌ಮೆಂಟ್ ಪ್ಯಾನಲ್‌ಗಳನ್ನು ಅಳವಡಿಸಿಕೊಂಡು ನಾಲೆಯ ಬದಿಗಳನ್ನು ಸುಂದರೀಕರಣಗೊಳಿಸುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಯೋಜಿಸಿದೆ.

ಈ ಸ್ಥಳದಲ್ಲಿ ನಾಲೆಯು ಸುಮಾರು 25 ರಿಂದ 30 ಮೀ ವರೆಗೆ ಅಗಲವಿದ್ದು ಈ ಸ್ಥಳದಲ್ಲಿ ನಾಲೆಯನ್ನು ಆರ್.ಸಿ.ಸಿ. ಪ್ರಿ ಕಾಸ್ಟ್ ಸೆಲ್ಯೂಲಾರ್ ಸೆಗ್‌ಮೆಂಟ್‌ಗಳನ್ನು ಅಳವಡಿಸಿಕೊಂಡು ಪುನರ್ ನವೀಕರಣ ಮಾಡುವ ನಿರ್ಮಾಣ ಕಾಮಗಾರಿಯನ್ನು ಅತ್ಯಂತ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ 2007-08 ನೇ ಸಾಲಿನ ದರಸೂಚಿಯ ಆಧಾರದ ಮೇಲೆ ತಯಾರಿಸಿದ್ದು, ಸದರಿ ಕಾಮಗಾರಿಯ ಮೊತ್ತ ರೂ.99.00 ಲಕ್ಷಗಳನ್ನು ವೃಷಭಾವತಿ ಕಣಿವೆ ಜೆಎನ್‌ಎನ್‌ಯುಆರ್‌ಎಂ ಯೋಜನೆಯಡಿಯಲ್ಲಿ ಭರಿಸಬಹುದಾಗಿದೆ.

ಈ ಹಿನ್ನಲೆಯಲ್ಲಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.99.00 ಲಕ್ಷಗಳ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:03/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:03/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 18/06/2008 ರ ನಡವಳಿಗಳು**

**ವಿಷಯ ಸಂಖ್ಯೆ:236/08-09**

ವಿಜಿನಾಪುರದಲ್ಲಿ ಖಾದಿ ಬೋರ್ಡ್‌ನಿಂದ ಈಸ್ಟ್ ಎನ್.ಜಿ.ಇ.ಎಫ್ ಬಡಾವಣೆ 3ನೇ 'ಎ' ಮುಖ್ಯರಸ್ತೆಯವರೆಗೆ ಕೆಂಪ್ ಸನ್ ಫ್ಯಾಕ್ಟರಿ ಮುಖಾಂತರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ವಿಜಿನಾಪುರದಲ್ಲಿ ಖಾದಿ ಬೋರ್ಡ್‌ನಿಂದ ಈಸ್ಟ್ ಎನ್.ಜಿ.ಇ.ಎಫ್. ಬಡಾವಣೆ 3ನೇ 'ಎ' ಮುಖ್ಯರಸ್ತೆಯವರೆಗೆ ಕೆಂಪ್ ಸನ್ ಫ್ಯಾಕ್ಟರಿ ಮುಖಾಂತರ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ತಪಾಸಣೆ ಸಮಯದಲ್ಲಿ ಕೈಗೊಳ್ಳಲು ಆದೇಶಿಸಿರುವ ಮೇರೆಗೆ, ಮಹದೇವಪುರ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು 2007-08ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಎಸ್.ಆರ್. ದರಗಳ ಆಧಾರದ ಮೇಲೆ ರೂ.74.40 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯ ವೆಚ್ಚವನ್ನು ವಿಶೇಷ ಅನುದಾನದ ಅಡಿಯಲ್ಲಿ ಭರಿಸಬಹುದಾಗಿದ್ದು, ಕಾಮಗಾರಿ ಸಂಕೇತವನ್ನು ಸಹ ಪಡೆಯಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಅಂದಾಜುಪಟ್ಟಿ ರೂ.74.40 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಸ/- ಆಡಳಿತಗಾರರು